ವಾಗಿ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ನೀರಾವರಿ ಸಚಿವರ ಗಮನ ಸೆಳೆಯುಬಯಸುತ್ತೇನೆ.

ಶ್ರೀ ಎಂ. ರಘುಪತಿ (ಬಂದರು ಮತ್ತು ಮೀನುಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರು ಆ ಸದನದಲ್ಲಿದ್ದಾರೆ. ಅದಕ್ಕೆ ಉತ್ತರವನ್ನು ಆಮೇಲೆ ತರಿಸಿಕೊಡುತ್ತೇನೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

12 Filling the Post of Chief Auditor in Hubli-Dharwar Corporation

SRI A. M. HINDUSGERI.—There are two separate posts of Chief Accountant and Chief Auditor in the Hubli-Dharwad City Corporation The Chief Accountant is performing the dual duties of both Chief Accountant and Chief Auditor for the last one year What are the problems that are confronting the Government in not posting a Chief Auditor to the Hubli-Dharwad City Corporation even after one year when the post has fallen vacant. I demand a statement from the Hon'ble Minister for Urban Development.

ಶ್ರೀ ಎಂ ಚಂದ್ರಶೇಖರಿರ್ (ನಗರಾಭಿವೃದ್ಧಿ ಸಚಿವರು) —ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಆಯುಕ್ತರು ದಿನಾಂಕ ೪-೬-೧೯೮೭ರ ತಮ್ಮ ವರದಿಯಲ್ಲಿ ತಿಳಿಸಿದ ಪ್ರಕಾರ ಮುಖ್ಯ ಲೆಕ್ಕಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಎಸ್. ಆರ್. ಪಾಟೀಲ್ ಇವರು ಸರ್ಕಾರದ ಆದೇಶಾನುಸಾರ ಸಂಖ್ಯೆ ಆರ್ಥಿಕ ೬ ೭ ರೂಲೇಬ ೮೬ ದಿನಾಂಕ ೨೬-೨-೮೭ರ ಪ್ರಕಾರ ಮಹಾನಗರಪಾಲಿಕೆಯಿಂದ ೨೬-೩-೮೭ರಂದು ಬಿಡುಗಡೆ ಹೊಂದಿರುತ್ತಾರೆ. ಮಹಾನಗರಪಾಲಿಕೆಯಲ್ಲಿ ಮುಖ್ಯ ಲೆಕ್ಕಾಧಿಕಾರಿಯ ಹುದ್ದೆಯು ಬಹು ಮಹತ್ವದ್ದಾಗಿರುವುದರಿಂದ, ನಗರಪಾಲಿಕೆಯಲ್ಲಿ ಮುಖ್ಯ ಲೆಕ್ಕ ಪರಿಶೋಧಕರಾಗಿ ಕೆಲಸ ಮಾಡುತ್ತಿರುವ ಶ್ರೀ ವಿರೂಪಾಕ್ಷಪ್ಪ ಇವರನ್ನು ತಮ್ಮ ಕರ್ತವ್ಯದ ಜೊತೆಗೆ ಮುಖ್ಯ ಲೆಕ್ಕಾಧಿಕಾರಿಯ ಹುದ್ದೆಯಲ್ಲಿ ಪ್ರಭಾರವಾಗಿ ಕೆಲಸ ಮಾಡಲು ನೇಮಿಸಲಾಗಿದೆ.

ಈ ಹುದ್ದೆಯಲ್ಲಿರುವ ಅಧಿಕಾರಿಗಳು ನಿರ್ವಹಿಸಬೇಕಾಗಿರುವ ಕೆಲಸಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ಹುದ್ದೆಯನ್ನು ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಡೆಪ್ಯೂಟಿ ಕಂಟ್ರೋಲರ್‌ರನ್ನು ನೇಮಿಸಿ ತುಂಬಬೇಕಾಗಿದೆ. ಆದ್ದರಿಂದ ಸದರಿ ಹುದ್ದೆಯನ್ನು ತುಂಬುವ ಸಲುವಾಗಿ ಸರ್ಕಾರಿ ಪತ್ರ ಸಂಖ್ಯೆ, ಮನಇ ೫೭ ಎಎಚ್‌ಡಿ ೮೭ ದಿನಾಂಕ ೨೪-೭-೮೭ರಂದು ಆರ್ಥಿಕ ಇಲಾಖೆಯನ್ನು ವಿನಂತಿಸಿಕೊಳ್ಳಲಾಗಿದೆ ಮತ್ತು ದಿನಾಂಕ ೨೦-೮-೮೭, ೮-೧೨-೮೭ ಮತ್ತು ೨೧-೩-೮೮ರಂದು ಆರ್ಥಿಕ ಇಲಾಖೆಗೆ ಜ್ಞಾಪನಾ ಪತ್ರಗಳನ್ನು ಕಳುಹಿಸಿಕೊಡಲಾಗಿದೆ.

ಈ ಹುದ್ದೆಯನ್ನು ತುಂಬಲು ಆದಷ್ಟು ಬೇಗ ಕ್ರಮ ಕೈಗೊಳ್ಳಲಾಗುವುದು.

೧೩ ಜನತಾ ಸರ್ಕಾರದಲ್ಲಿರುವ ಭ್ರಷ್ಟಾಚಾರ ಮತ್ತು ಆಪಾದನೆಗಳ ಬಗ್ಗೆ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ,

ಜನತಾ ಸರ್ಕಾರಕ್ಕೆ ತುಂಬಿತ್ತು ಐದು ವರ್ಷ, ಓ ಐದು ವರುಷ
ಈ ಐದು ವರುಷ ತುಂಬಿತು ಎಂದು ಸರಕಾರಕ್ಕೆ ಹರ್ಷ,
ಆದರೆ ಪತ್ರಿಕೆಗಳಲ್ಲಿ ಈಚೆಗೆ ಬಂತು ಎಂಥೆಂಥ ಆರೋಪ ವರ್ಷ ?
ಹಳೆಯ ಆರೋಪಗಳ ಸಂಪಾದನೆಯ ಜೊತೆಗೆ
ಇತ್ತೀಚೆಗೆ ಸರಕಾರಕ್ಕೆ ಅಂದರು ಬಿ. ಬಿ. ಶಿವಪ್ಪ